ಎಲ್ಲ ಬಿಹಾರ, ಅಸ್ಸಾಂ ಕಡೆಯ ಕೆಲಸಗಾರರು. ಅವರಿಗೆ ನಮ್ಮ ಹಾಗೆ ತಿಂಡಿ ಮಾಡ್ಲಿಕ್ಕೆ ಬರೂದಿಲ್ಲ. ಹಾಗಾಗಿ ಹೋಟ್ಲು ಸಾ ಬಂದು ಮಾಡಿ ಇದ್ದದ್ದನ್ನೆಲ್ಲ ಕಟ್ಟಿಕೊಂಡು ಬಂದಿದ್ದೇವೆ ಅಂತ ಹೇಳಿದ. ನಂಗೆ ಅವ ಆಧಾರ ಆಗ್ತಾನೆ ಅಂತ ನಾನು ಎಣಿಸಿದ್ರೆ, ಅವ ನನ್ನ ಆಧಾರವನ್ನೆ ಬಯಸ್ತಾ ಇದ್ದಾನೆ. ಕ್ವಾರಂಟೈನ್ ಅವಧಿ ಮುಗ್ದ ನಂತ್ರ ಅವನೇ ಮನೆಯ ಜವಾಬ್ದಾರಿ ಪೂರ ತೆಕ್ಕೊಂಡು ಬಿಟ್ಟ. ಅವನ ಹೆಂಡತಿ ಅಡುಗೆ ಮನೆದ್ದು ಮಾತ್ರ ಅಲ್ಲ ಪೂರ ಜವಾಬ್ದಾರಿ ತೆಕ್ಕೊಂಡ್ಲು. ನೋಡ್ತಾ ಇದ್ದ ಹಾಗೇ ನಾನು ನನ್ನ ಮನೆಯಲ್ಲೇ ಪರಕೀಯ ಆದಂತೆ ಆಯಿತು.'

'ಯಾಕೆ? ಅಂಥ ಭಾವನೆ ಮೂಡಿದ್ದು?'

ದಯಾನಂದನಿಗೆ ಬಾಯಾರಿಕೆ ಆಗಿತ್ತು. 'ಒಂಚೂರು ನೀರು ಕೊಡ್ತಿರಾ?' ಅಂತ ಕೇಳಿದ. ಒಬ್ಬ ಸಾಧು ನೀರುಕೊಟ್ಟ. ಸುಧಾರಿಸಿಕೊಂಡ ಅನಂತರ ದಯಾನಂದ ಮುಂದುವರಿಸಿದ.

'ಸುರುಸುರುವಿಗೆ ನಂಗೆ ಎಂಥದು ಬೇಕಾ ಅಂತದನ್ನೇ ಬೇಯಿಸಿ ಹಾಕ್ತಿದ್ಲು. ಆಮೇಲಾಮೇಲೆ, ಭಾವಾ ನಿಮಿಗೆ ಮೂರು ದೋಸೆ ಸಾಕಾಗುದಿಲ್ವಾ? ಚಪಾತಿ ಎರಡೇ ಸಾಕು ಅಂತೆಲ್ಲ ಡೈಟ್ ಮಾಡ್ಲಿಕ್ಕೆ ಸುರು ಮಾಡಿದ್ಲು. ತಮ್ಮ ಸಾ ಅದಕ್ಕೇ ಸಪೋರ್ಟ್. ಸಾಮಾನು ತರ್ಲಿಕ್ಕೆ ಅವನಿಗೆ ನಾನೇ ದುಡ್ಡು ಕೊಡ್ಬೇಕು. ಆದ್ರೆ, ಸಾಮಾನು ತಂದು ಹಾಕಿದವ, 'ಅಣ್ಣಾ ನೀವು ಖರ್ಚು ಕಡಿಮೆ ಮಾಡಿದ್ರೆ ನಾನು ಬಚಾವ್. ಇಲ್ಲಾಂತಾದ್ರೆ ಭಾರೀ ಬಂಜ್ಗ ಉಂಟು' ಅಂತ ಹೇಳಲಿಕ್ಕೆ ಸುರು ಮಾಡಿದ. ನಾನು ಇರೂದು ಒಬ್ಬ. ತಿನ್ನುದು ನಿನ್ನ ಹೆಂಡತಿ ಯೆಂತ ಬೇಯಿಸಿ ಹಾಕ್ತಾಳಾ ಅದನ್ನು. ಅದೂ ಸಾ ಲೆಕ್ಕದ್ದು. ಹೀಗಿರುವಾಗ ನನ್ನದು ಯೆಂತ ಖರ್ಚು ಮಾರಾಯಾ? ಅಂತ ಕೇಳಿದೆ. ನಿನ್ನದು ಶುಗರ್, ಬಿ.ಪಿ.ದ್ದು ಮಾತ್ರೆ ಅದು ಇದೂ ಅಂತ ಖರ್ಚು ಜಾಸ್ತಿ ಆಗ್ತದೆ ಅಂದ. ಅವನ ಹೆಂಡತಿ, ಭಾವಾ ನೀವು ಈಗ ಹಿಂದಿನ ಹಾಗೆ ಗದ್ದೆ ತೋಟದಲ್ಲಿ ದುಡಿಯೂದಿಲ್ಲ ಅಲ್ವಾ? ಇಡೀ ದಿನ ಕೂತ್ಕೊಂಡೇ ಇರ್ತೀರಿ ಅಂತ ಆಗಾಗ ಕುಚ್ಚಣಿಸ್ಲಿಕ್ಕೆ ಸುರು ಮಾಡಿದ್ಲು.

ಮೊನ್ನೆ ಒಂದು ದಿನ ರಾತ್ರಿ ಊಟ ನಂಗೆ ಅರೆ ಬರೆ ಬಿದ್ದಿತ್ತು. ಸಮಾ ಹೊಟ್ಟೆ ತುಂಬಿರ್ಲಿಲ್ಲ. ಮಾತ್ರ ಅಲ್ಲ, ಅವಳ ನೆನಪೂ ಕೂಡ ಆಗ್ತಾ ಇತ್ತು. ನಿದ್ದೆ ಬರದೆ ಒದ್ದಾಡ್ತಾ ಇದ್ದೆ. ಉಚ್ಚೆ ಹೊಯ್ಬೇಕು ಅಂತ ಅನಿಸಿತು. ಎದ್ದು ಬಂದೆ. ತಮ್ಮನ ಮಕ್ಕಳು ಅಮ್ಮ ಅಪ್ಪಾ ನೀವು ಯಾಕೆ ದೊಡ್ಡಪ್ಪನನ್ನು ಹೀನಾಯವಾಗಿ ಕಾಣುದು? ಪಾಪ ಅವರು ನಮಿಗೆ ಅಂತ ಎಷ್ಟು ಕಷ್ಟಪಟ್ಟಿದ್ದಾರೆ. ಅಂಥವರನ್ನು ನೀವು ಹೀಗೆ ಕಾಣುದಾ? ಅವರಿಗಾದ್ರೂ ಯಾರಿದ್ದಾರೆ ನಮ್ಮನ್ನು ಬಿಟ್ರೆ? ಅಂತ ಕೇಳ್ತಿದ್ದವು. ಅದಕ್ಕೆ ನನ್ನ ತಮ್ಮ ಸುಮ್ನೆ ಕೂತ್ಕೊಳ್ಳಿ. ನಿಮಿಗೆ ಇದೆಲ್ಲ ಬೇಡ. ದೊಡ್ಡವರ ವಿಷಯ. ಅವ ಆದಷ್ಟು ಬೇಗ ಇಲ್ಲಿಂದ ಕಳಚಿಕೊಂಡ್ರೆ ಸಾಕು. ಯಾರಿಗೂ ತೊಂದರೆ ಕೊಡದೆ ಹೋದ್ರೆ ಸಾಕು ಅಂತ ಹೇಳಿದ. ಅದಕ್ಕೆ ಅವನ ಹೆಂಡತಿ ಹೌದೂಂತ ಆ ಮುದುಕ ಹಿಂದಿನ ಹಾಗೆ ದುಡಿಯೂದಿಲ್ಲ. ಬೇಗ ಸತ್ರೆ ಒಳ್ಳೇದು ಅಂತ ಊಟ ತಿಂಡಿಯೆಲ್ಲ ಕಡಿಮೆ ಕಡಿಮೆಯೇ ಕೊಡ್ತಾ ಇದ್ದೇನೆ ಅಂದ್ಲು. ಇದೆಲ್ಲ ಕೇಳಿ ನಂಗೆ ಹೇಗೆ ಆಯ್ತೂ ಅಂದ್ರೆ ಆಗ್ಲೇ ಬಾವಿಗೆ ಹಾರುವಾ ಅಂತ ಆಯ್ತು. ಆವತ್ತು ರಾತ್ರಿ ಇಡೀ ನಿದ್ರೆ ಬರ್ಲಿಲ್ಲ. ಬೆಳಗ್ಗೆ ಎದ್ದವನೇ ಯಾರಿಗೂ ಹೇಳದೆ ಸಿಕ್ಕಿದಷ್ಟು ದುಡ್ಡು, ಒಂದೆರಡು ಜೋಡಿ ಬಟ್ಟೆ ಎಲ್ಲ ಒಂದು ಜೋಳಿಗೆಗೆ ಹಾಕಿಕೊಂಡು ರಸ್ತೆಗೆ ಬಂದೆ. ಒಂದು ವಾಹನವೂ ಸಿಗ್ಲಿಲ್ಲ. ನಡ್ಕೊಂಡೇ ಬಂದೆ. ನಿನ್ನೆ ರಾತ್ರಿ ಒಂದು ದೇವಸ್ಥಾನದ ಜಗುಲಿಯಲ್ಲಿ ಮಲಗಿದ್ದೆ. ಇವತ್ತು ಬೆಳಗ್ಗೆ ಎದ್ದು ಇಲ್ಲೀ ತಂಕ ಬಂದೆ. ಇದಿಷ್ಟು ನನ್ನ ಕತೆ' ಅಂತ ಹೇಳಿ ತಲೆ ಅಡಿಗೆ ಹಾಕಿ ಕೂತ.

'ಹೂಂ... ಮುಂದೆ ಏನು? ಎತ್ತ?'

'ಸಾಧುಗಳೇ ನಂಗೆ ಎಂತಸಾ ಗೊತ್ತಿಲ್ಲ. ಒಂದು ಸಲ ಅನ್ನಿಸ್ತದೆ ವಾಪಸ್ ಮನೆಗೇ ಹೋಗುವಾ ಅಂತ. ತಮ್ಮ ಎಷ್ಟಾದ್ರೂ ರಕ್ತ ಹಂಚಿಕೊಂಡವ ಅಲ್ವಾ? ನಾನು ಎಲ್ಲಿದ್ದೇನೆ ಅಂತ ಗಾಬರಿಯಾಗಿ